ದಿನಾಂಕ 04.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ-ಶ್ರೀಮತಿ ಎಸ್.ಎನ್.ಎಸ್. ವಕೀಲರಿಂದಃ-</u>**

ನಾನು ಈ ದಾವೆಯನ್ನು ತಹಶೀಲ್ದಾರ ರವರು ಮಾಡಿದ ಆದೇಶದ ಮೇಲೆ ಸಲ್ಲಿಸಿರುತ್ತೇನೆ. ತಹಶೀಲ್ದಾರವರು ಯಾವ ಸರ್ವೆ ನಂಬರ ಗೆ ಸಂಬಂಧಿಸಿದಂತೆ ಆದೇಶವನ್ನು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. 10ನೇ ಪ್ರತಿವಾದಿ ನನ್ನ ಅಣ್ಣ. 11ನೇ ಪ್ರತಿವಾದಿ ನನ್ನ ಅತ್ತಿಗೆ. 12 ಮತ್ತು 13ನೇ ಪ್ರತಿವಾದಿಗಳು 10ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ತಹಶೀಲ್ದಾರ ರವರ ನ್ಯಾಯಾಲಯದ ಆದೇಶದ ಪ್ರಕಾರ ಪ್ರತಿವಾದಿ 1 ರಿಂದ 9 ಮತ್ತು 14 ರಿಂದ 20 ರವರನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. 17ನೇಯ ಪ್ರತಿವಾದಿಯ ಕೆಳಗಿನ ಅಧಿಕಾರಿಗಳು ತಹಶೀಲ್ದಾರ ವರೊಂದಿಗೆ ಶಾಮೀಲಾಗಿದ್ದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ. 19 ಮತ್ತು 20ನೇ ಪ್ರತಿವಾದಿರವರುಗಳ ವಿರುದ್ಧ ನಾವು ಯಾವುದೇ ಪರಿಹಾರವನ್ನು ಈ ದಾವೆಯಲ್ಲಿ ಕೇಳಿರುವುದಿಲ್ಲ, ಬದಲಿಗೆ 17ನೇ ಪ್ರತಿವಾದಿಯನ್ನು ಸೇರಿಸಲಾಗಿರುವುದ್ದರಿಂದ ಇವರನ್ನು ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ.

ಪ್ರತಿವಾದಿ 1 ರಿಂದ 9, 14 ರಿಂದ 20 ರವರುಗಳ ಮೇಲೆ ಯಾವುದೇ ಪರಿಹಾರವನ್ನು ದಾವೆಯಲ್ಲಿ ಕೇಳಿಲ್ಲದೇ ಇರುವುದರಿಂದ ಅವರು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರ ರವರು ಮಾಡಿದ ಆದೇಶ ಸರಿಯಿರುವುದಿಲ್ಲ ಎಂದು

ನಾವು ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 30.03.1976 ರ ವಿಭಾಗಪತ್ರದಲ್ಲಿ ದಾವಾ ಸ್ವತ್ತುಗಳನ್ನು ಸೇರ್ಪಡೆ ಮಾಡಲಾಗಿತ್ತು ಎಂದರೆ ಸರಿ. ಸದರಿ ವಿಭಾಗ ಪತ್ರದ ಪ್ರಕಾರ ನನ್ನ ತಂದೆ-ತಾಯಿಗೆ ಜಂಟಿಯಾಗಿ ಒಂದು ಹಿಸ್ಸೆ ಯನ್ನು ಹಾಗೂ ನನಗೆ ಮತ್ತು 10 ನೇ ಪ್ರತಿವಾದಿಗೆ ಪ್ರತ್ಯೇಕವಾಗಿ ಒಂದೊಂದು ಹಿಸ್ಸೆಯನ್ನು ನೀಡಲಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆ-ತಾಯಿಗೆ ಜಂಟಿಯಾಗಿ ಒಂದು ಹಿಸ್ಸೆ ನೀಡಿರುವುದಿಲ್ಲ, ಬದಲಿಗೆ ನನ್ನ ತಂದೆಗೆ, ನನಗೆ ಮತ್ತು 10 ನೇ ಪ್ರತಿವಾದಿಗೆ ತಲಾ ಒಂದು ಹಿಸ್ಸೆಯಂತೆ ಮೂರು ಭಾಗ ತೋರಿಸಲಾಗಿದೆ ಎಂದು ಉತ್ತರಿಸಿರುತ್ತಾರೆ. ವಿಭಾಗಪತ್ರದಲ್ಲಿ ಎ ಶೆಡ್ಯೂಲ್ ಆಸ್ತಿಗಳನ್ನು ನನ್ನ ತಂದೆಯ ಹಿಸ್ಸೆಗೆ, ಸಿ ಶೆಡ್ಯೂಲ್ ಆಸ್ತಿಗಳನ್ನು ನನ್ನ ಹಿಸ್ಸೆಗೆ ಮತ್ತು ಬಿ ಶೆಡ್ಯೂಲ್ ಆಸ್ತಿಗಳನ್ನು 10 ನೇ ಪ್ರತಿವಾದಿಯ ಹಿಸ್ಸೆಗೆ ತೋರಿಸಲಾಗಿದೆ ಎಂದರೆ ಸರಿ. ವಿಭಾಗಪತ್ರವನ್ನು ನೋಂದಣಿ ಮಾಡಿಸಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ನಾನು ನ್ಯಾಯಾಲಯದಲ್ಲಿ ದೃಢೀಕೃತ ಪ್ರತಿಯನ್ನು ನೋಡಿರುತ್ತೇನೆ. ಮೂಲ ವಿಭಾಗಪತ್ರವನ್ನು ನೋಡಿರುವುದಿಲ್ಲ ಹಾಗೂ ಸದರಿ ವಿಭಾಗಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಪ್ರಸ್ತುತ ಸರ್ವೆ ನಂ. 159/2 ಬಿ ಯ ಪಹಣಿಯಲ್ಲಿ ವಿಸ್ತೀರ್ಣ 6.35 ಎಕರೆ ಎಂದು ನಮೂದು ಮಾಡಲಾಗಿದೆ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ)

ಸಹಿ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.